ಮಾಡುತ್ತೀರಿ?

ಅಧ್ಯಕ್ಷರು:- ಆಗ ಇಲ್ಲ. ನೀವೇ ಮಾಡಿಸಿ ಅದಕ್ಕೇನಂತೆ.

ಶ್ರೀ ಎಚ್.ಸಿ.ಬಾಲಕೃಷ್ಣ:- ಅದಲ್ಲ ಪ್ರಶ್ನೆ ಅಧ್ಯಕ್ಷರೆ, ಸಾವನದುರ್ಗದಲ್ಲಿ ಕನಿಷ್ಟ ಒಂದು ಬಸ್ ಸೌಲಭ್ಯ ಕೂಡ ಇಲ್ಲ. ಅದರ ಜೊತೆಗೆ ಅಲ್ಲಿಗೆ ಹೋದಂತಹ ಜನಗಳಿಗೆ ಊಟದ ವ್ಯವಸ್ಥೆ ಮಾಡಲು ಒಂದು ಹೋಟೆಲ್ ಇಲ್ಲ. ಅಲ್ಲೊಂದು ಕೆಂಪೇಗೌಡ ವನಧಾಮ ಎಂದು ಹಿಂದೆ ಇದ್ದ ಸರ್ಕಾರದವರು ಮಾಡಿದ್ದಾರೆ. ಅದನ್ನು ನೋಡಿಕೊಳ್ಳತಕ್ಕಂಥವರು ಯಾರೂ ಇಲ್ಲ. ಇಂತಹ ಒಂದು ಪರಿಸ್ಥಿತಿ ಇದೆ. ದಯಮಾಡಿ ಅದಕ್ಕೆ ಜವಾಬ್ದಾರಿಯಾದಂತಹ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್:- ಯಾರೂ ಖಾಸಗೀ ಉದ್ದಿಮೆಯವರು ಬರದೇ ಇದ್ದರೆ ನೀವೇನು ಮಾಡುತ್ತೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ನಮ್ಮದು ಅಂದರೆ ಪ್ರವಾಸೋದ್ಯಮ ಇಲಾಖೆಯಿಂದ ಜವಾಬ್ದಾರಿಯೂ ಸಹ ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಹೇಳಿದ ಹಾಗೆ ಈ ಸ್ಥಳಗಳಿಗೆ ಹೋಗಬೇಕಾದರೆ ಮೊದಲು ರಸ್ತೆಗಳು ಆಗಬೇಕು. ರಸ್ತೆಗಳನ್ನು ಸರಿಪಡಿಸಿದ ಮೇಲೆ ಪ್ರವಾಸಿಗರು ಆ ಸ್ಥಳಕ್ಕೆ ಬರುತ್ತಾರೆ. ಅಲ್ಲಿ ನಮ್ಮಿಂದಲೇ ಯಾವುದಾದರೂ ಯಾತ್ರಾ ನಿವಾಸ್ ಕಟ್ಟತಕ್ಕ ವ್ಯವಸ್ಥೆ ಇದ್ದರೆ ಅದನ್ನು ನಾವು ಮಾಡುವುದಕ್ಕೆ ಸಿದ್ಧವಾಗಿದ್ದೇವೆ.

12.10 ಪಿ.ಎಂ.

ಶ್ರೀ ಎಚ್.ಸಿ.ಬಾಲಕೃಷ್ಣ:- ಯಾವಾಗ ಮಾಡುತ್ತೀರಿ? ಎಷ್ಟು ದಿವಸಗಳಲ್ಲಿ ಮಾಡುತ್ತೀರಿ? ನನ್ನ ಕ್ಷೇತ್ರದ ವ್ಯಾಪ್ತಿಗೆ ಸೇರಿರುವ ದೊಡ್ಡ ಆಲದಮರ, ಮಂಚನಬೆಲೆ, ಸಾವನದುರ್ಗ ಮತ್ತು ತಿಪ್ಪಗೊಂಡನಹಳ್ಳಿಗೆ ಬಸ್ಸು ಸೌಲಭ್ಯ ಒದಗಿಸಿಕೊಡುತ್ತೀರಾ? ಪ್ರತಿನಿತ್ಯವೂ ಜನರು ಆ ಸ್ಥಳಗಳಿಂದ ಬೇರೆ ಸ್ಥಳಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಓಡಾಡುತ್ತಿರುವುದರಿಂದ ಬಸ್ಸುಗಳ ಸೌಲಭ್ಯವಿಲ್ಲದೆ ತುಂಬಾ ತೊಂದರೆಯಾಗಿದೆ. ಕೊನೇ ಪಕ್ಷ ಸಾವನದುರ್ಗಕ್ಕಾಗದರೂ ಬಸ್ಸಿನ ಸೌಲಭ್ಯ ಒದಗಿಸಿಕೊಡಬೇಕು. ಅಲ್ಲಿ ಒಂದು ಹೋಟೆಲ್ ವ್ಯವಸ್ಥೆಯೂ ಇಲ್ಲ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್:- ನಮಗೇನಾದರೂ ಅವಕಾಶಗಳಿದ್ದರೆ, ಅದನ್ನು ಯಾವ ರೀತಿ ಸುಧಾರಣೆ ಮಾಡಬಹುದೆಂಬುದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು:- ಮಾನ್ಯ ಸದಸ್ಯರು ಕೇಳಿರುವ ಸ್ಥಳಗಳಿಗೆ ಕೆಲವು ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಕೇಳುತ್ತಿರುವುದರಿಂದ, ಅದರ ಬಗ್ಗೆ ಆಲೋಚಿಸಿ.

ವಿಷಯ:- ಹೊಸದಾಗಿ ರಾಷ್ಟ್ರೀಯ ಹೆದ್ದಾರಿಗಳ ಘೋಷಣೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 101 (120)

ಶ್ರೀ ಹೆಚ್.ಶಿವಪ್ಪ (ಹರಿಹರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇದುವರೆವಿಗೆ ಘೋಷಿಸಲಾಗಿರುವ ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ವಿವರ.

ಆ) ಹೊಸದಾಗಿ ರಾಷ್ಟ್ರೀಯ ಹೆದ್ದಾರಿಯನ್ನು ಘೋಷಿಸುವ ಪ್ರಸ್ತಾವನೆಗಳು ಇದೆಯೇ? ಹಾಗಿದ್ದಲ್ಲಿ ಪ್ರಸ್ತಾಪಿಸಲಾಗಿರುವ ರಸ್ತೆಗಳು ಯಾವುವು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಇದುವರೆವಿಗೆ ಘೋಷಿಸಲಾಗಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಾಜ್ಯದಲ್ಲಿ ಹಾದು ಹೋಗಿರುವ ರಸ್ತೆಯ ಒಟ್ಟು ಉದ್ದ 1997 ಕಿ.ಮೀ.

ಆ) ಒಟ್ಟು 5555 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. (ಅನುಬಂಧ - 'ಅ'ನಲ್ಲಿರುವಂತೆ).

ಅನುಬಂಧ - 'ಅ'

ಕ್ರಮ ಸಂಖ್ಯೆ	ರಾಜ್ಯ ಹೆದ್ದಾರಿಯ ಹೆಸರು	ಕರ್ನಾಟಕ ರಾಜ್ಯದಲ್ಲಿರುವ ಉದ್ದ (ಕಿ.ಮೀ.ಗಳಲ್ಲಿ)
1.	ಆಂಧ್ರಪ್ರದೇಶದ ಗೂಟಿ - ಗುಂತಕಲ್ - ಬಳ್ಳಾರಿ - ಹೊಸಪೇಟೆ - ಕೊಪ್ಪಳ - ಗದಗ - ಹುಬ್ಬಳ್ಳಿ - ಯಲ್ಲಾಪುರ - ಬಾಳಗುಳಿ - ಕಾರವಾರ (ರಾ.ಹೆ. 17 ನ್ನು ಸೇರುವುದು)	422
2.	ಬೆಂಗಳೂರು - ಮೈಸೂರು - ನಂಜನಗೂಡು - ಗುಂಡ್ಲುಪೇಟೆ - ಊಟಿ - ಕೊಯಮತ್ತೂರು (ರಾ.ಹೆ. 47 ನ್ನು ಸೇರುವುದು)	220
3.	ಮೈಸೂರ - ಶ್ರೀರಂಗಪಟ್ಟಣ - ನಾಗಮಂಗಲ - ಚಿಕ್ಕನಾಯಕನಹಳ್ಳಿ - ಹುಳಿಯಾರ್ - ಹಿರಿಯೂರು - ಬಳ್ಳಾರಿ - ಸಿರಿಗುಪ್ಪ - ಗುಲ್ಬರ್ಗ - ಶಹಾಪುರ - ಹುಮ್ನಾಬಾದ್ (ರಾ.ಹೆ. 9 ನ್ನು ಸೇರುವುದು)	678

4.	ತುಮಕೂರು - ಅರಸೀಕೆರೆ - ಶಿವಮೊಗ್ಗ - ಸಾಗರ - ಹೊನ್ನಾವರ (ರಾ.ಹೆ. 17 ನ್ನು ಸೇರುವುದು)	337
5.	ಬೆಂಗಳೂರು - ಮೈಸೂರು - ಮಡಿಕೇರಿ - ಮಂಗಳೂರು (ರಾ.ಹೆ. 17 ನ್ನು ಸೇರುವುದು)	385
6.	ಬೆಳಗಾಂ - ಬಾಗಲಕೋಟೆ - ರಾಯಚೂರು - ಮೆಹಬೂಬ್ ನಗರ (ಆಂಧ್ರಪ್ರದೇಶ)	336
7.	ಬೆಳಗಾಂ - ಬಿಜಾಪುರ - ಗುಲ್ಬರ್ಗಾ - ಹುಮ್ನಾಬಾದ್ (ರಾ.ಹೆ. 9 ನ್ನು ಸೇರುವುದು)	364
8.	ಚಿತ್ರದುರ್ಗ - ಹೊಳಲ್ಕೆರೆ - ಹೊಸದುರ್ಗ - ಚಿಕ್ಕಮಗಳೂರು - ಮೂಡಿಗೆರೆ - ಬೆಳ್ತಂಗಡಿ - ಭಂಟ್ವಾಳ - ಮಂಗಳೂರು (ರಾ.ಹೆ. 17 ನ್ನು ಸೇರುವುದು)	283
9.	ಧಾರವಾಡ - ಲೋಂಡಾ - ಅನ್‌ಮೋದ್ - ಪಣಜಿ (ರಾ.ಹೆ. 17 ನ್ನು ಸೇರುವುದು)	95
10.	ಪಡುಬಿದ್ರಿ - ಕಾರ್ಕಳ - ಶೃಂಗೇರಿ - ತೀರ್ಥಹಳ್ಳಿ - ಶಿಕಾರಿಪುರ - ಶಿರಾಳಕೊಪ್ಪ - ಹುಬ್ಬಳ್ಳಿ - ಬಾಗಲಕೋಟೆ - ಹುನಗುಂದ.	550
11.	ಶಿರಾ (ರಾ.ಹೆ.4 ರಲ್ಲಿ ಬೆಂಗಳೂರು - ಪೂಣೆ ರಸ್ತೆ) ಮಧುಗಿರಿ - ಗೌರಿಬಿದನೂರು - ಚಿಕ್ಕಬಳ್ಳಾಪುರ - ಮುಳಬಾಗಿಲು.	160
12.	ಚಿತ್ರದುರ್ಗ - ತಲ್ಲಿಚೇರಿ (ಕೇರಳ)	325
13.	ಬೆಂಗಳೂರು - ಕ್ಯಾಲಿಕಟ್ (ಕೇರಳ)	250
14.	ಬೆಂಗಳೂರು - ಮೈಸೂರು - ಹುಣಸೂರು - ವಿರಾಜಪೇಟೆಯಿಂದ ಕ್ಯಾಲಿಕಟ್ ನಡುವಣ ಹೆದ್ದಾರಿ ರಾಜ್ಯದ ಗಡಿಯವರೆಗೆ	270

15.	ರಾ.ಹೆ.4 ರಲ್ಲಿನ ಡಾಬಸ್‌ಪೇಟೆಯಿಂದ ರಾ.ಹೆ.7ರಲ್ಲಿನ ಅತ್ತಿಬೆಲೆವರೆಗೆ ದೇವನಹಳ್ಳಿ - ಕೋಲಾರ ಮಾರ್ಗ	150
16.	ರಾ.ಹೆ. 17ರಲ್ಲಿನ ಮಂಗಳೂರಿನಿಂದ ಆಂಧ್ರಪ್ರದೇಶದ ಗುಂತಕಲ್‌ವರೆಗೆ ಶಿವಮೊಗ್ಗ - ಹರಿಹರ - ಕೂಡ್ಲಿಗಿ - ಬಳ್ಳಾರಿ ಮಾರ್ಗ.	400
17.	ರಾ.ಹೆ. 17ರಲ್ಲಿನ ಅಂಕೋಲದಿಂದ ರಾ.ಹೆ. 18ರಲ್ಲಿನ ಬಿಜಾಪುರವರೆಗೆ ಹುಬ್ಬಳ್ಳಿ - ಬೀಳಗಿ ಮಾರ್ಗ.	330
	ಒಟ್ಟು ಕಿ.ಮೀ.	5555

ಶ್ರೀ ಹೆಚ್.ಶಿವಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಈಗಾಗಲೇ ರಾಜ್ಯದಲ್ಲಿ ಒಟ್ಟು 1997 ಕಿಲೋಮೀಟರ್ ಉದ್ದದಷ್ಟು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಲಾಗಿದೆಯೆಂದು ತಿಳಿಸಿದ್ದಾರೆ. ಎಷ್ಟು ವರ್ಷದಿಂದ ಇಷ್ಟೇ ಕಿಲೋಮೀಟರ್‌ಗಳ ಅಂಕೆ ಇದೆ? ರಾಷ್ಟ್ರೀಯ ಹೆದ್ದಾರಿಯನ್ನು ಇನ್ನೂ ವಿಸ್ತಾರ ಮಾಡುವುದಕ್ಕೆ ನೀವೇನಾದರೂ ಪ್ರಯತ್ನ ಮಾಡಿದ್ದೀರೋ? ಹೊಸದಾಗಿ ರಾಷ್ಟ್ರೀಯ ಹೆದ್ದಾರಿಯನ್ನು ಘೋಷಿಸುವ ಪ್ರಸ್ತಾವನೆಗಳೇನಾದರೂ ಇದೆಯೇ ಎಂಬ ಎರಡನೆಯ ಪ್ರಶ್ನೆಗೆ ಉತ್ತರವಾಗಿ 5555 ಕಿಲೋಮೀಟರ್‌ಗಳಷ್ಟು ಉದ್ದದ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೆಂದು ತಿಳಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳೆಂದು ಘೋಷಿಸುವುದಕ್ಕೆ ಮಾನದಂಡಗಳೇನು? ಪ್ರಸ್ತಾವನೆಗಳು ಎಷ್ಟು ವರ್ಷಗಳಿಂದ ಪೆಂಡಿಂಗ್ ಇದೆಯೆಂಬುದನ್ನು ದಯವಿಟ್ಟು ತಿಳಿಸುತ್ತೀರೋ?

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಶಿವಪ್ಪನವರು ಕೇಳಿರುವಂಥ ಪ್ರಶ್ನೆಗೆ ಉತ್ತರಿಸುವುದಾದರೆ 1972ರಿಂದೀಚೆಗೆ ರಾಜ್ಯದಲ್ಲಿ ಹೊಸದಾಗಿ ಯಾವುದೇ ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಣೆಯಾಗಿರುವುದಿಲ್ಲವೆಂಬ ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ರಾಜ್ಯದಲ್ಲಿನ 17 ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಘೋಷಿಸಬೇಕೆನ್ನುವ ಪ್ರಸ್ತಾವನೆ ಕೇಂದ್ರ ಸರ್ಕಾರದ ಮುಂದಿಟ್ಟು, ಅನುಮತಿಗಾಗಿ ಕೋರುತ್ತಿದ್ದೇವೆ. ಪ್ರಸ್ತಾವನೆಗೆ ತೀವ್ರಗತಿಯಿಂದ ಒಪ್ಪಿಗೆ ಪಡೆಯುವಂಥ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಶಿವಪ್ಪ:- ಪ್ರಸ್ತಾವನೆ ಕೇಂದ್ರ ಸರ್ಕಾರದ ಮುಂದೆ ಎಷ್ಟು ವರ್ಷಗಳಿಂದ ಪೆಂಡಿಂಗ್ ಇದೆ. ಮತ್ತು ಈ ರಸ್ತೆಗಳ ನಿರ್ವಹಣೆಗಾಗಿ ಒಂದು ಏಕರೂಪತೆಯನ್ನು ಘೋಷಿಸುತ್ತೀರೊ?

ಶ್ರೀ ಸಿ.ಎಂ.ಉದಾಸಿ:- ತಾವು ಕೇಳಿರುವ ಮಾಹಿತಿಯನ್ನು ಅನಂತರ ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಹಿಂದೆ ಕೇಂದ್ರದಲ್ಲಿ ಭೂ ಸಾರಿಗೆ ಸಚಿವರಾಗಿದ್ದ ಶ್ರೀ ಎಂ.ರಾಜಶೇಖರಮೂರ್ತಿಯವರು ಮೈಸೂರು - ನಂಜನಗೂಡು - ಚಾಮರಾಜನಗರ - ಕೊಯಮತ್ತೂರು ಮತ್ತು ಮೈಸೂರು - ಟಿ.ನರಸೀಪುರ - ಮಲೆ ಮಹದೇಶ್ವರ ಬೆಟ್ಟ, ಈ ಎರಡು ಮಾರ್ಗಗಳ ರಸ್ತೆಗಳ ದುರಸ್ತಿಗಾಗಿ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಹಣವನ್ನು ಒದಗಿಸುವುದಾಗಿ ಹೇಳಿಕೆ ಕೊಟ್ಟಿದ್ದರು. ಇದರ ಬಗ್ಗೆ ಒಂದು ಆದೇಶವೂ ಸಹ ಆಗಿತ್ತು. ಈಗ ಅದು ಯಾವ ಹಂತದಲ್ಲಿದೆ? ಇದರ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ?

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಸದಸ್ಯರು ಕೇಳಿರುವ ಮಾಹಿತಿಯನ್ನು ಅನಂತರ ಒದಗಿಸಿಕೊಡುತ್ತೇನೆ.

ಶ್ರೀ ಹೆಚ್.ಶಿವಪ್ಪ:- ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗೆ ಮಾನ್ಯ ಮಂತ್ರಿಗಳಿಂದ ಉತ್ತರ ಬರಲಿಲ್ಲ. ರಾಷ್ಟ್ರೀಯ ಹೆದ್ದಾರಿಗಳನ್ನು ಘೋಷಿಸುವುದಕ್ಕೆ ಇರುವ ಮಾನದಂಡಗಳೇನು ಎಂದು ಕೇಳಿದೆ. ಯಾವ ಆಧಾರದ ಮೇಲೆ ರಾಷ್ಟ್ರೀಯ ಹೆದ್ದಾರಿಗಳೆಂದು ಘೋಷಿಸುವುದಕ್ಕೆ ಪ್ರಯತ್ನಿಸುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಸಿ.ಎಂ.ಉದಾಸಿ:- ರಸ್ತೆಯಲ್ಲಿನ ವಾಹನ ಸಂಚಾರದ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಅದನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತೇವೆ.

ಶ್ರೀ ಹೆಚ್.ಶಿವಪ್ಪ:- ಇದು ಸಮರ್ಪಕವಾದ ಉತ್ತರವಲ್ಲ. ರಸ್ತೆಯಲ್ಲಿ ಎಷ್ಟು ಪ್ರಮಾಣದಲ್ಲಿ ವಾಹನ ಸಂಚಾರವಿದ್ದರೆ ಆ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಲು ಅರ್ಹತೆ ಇರುತ್ತದೆ ಎನ್ನುವುದನ್ನಾದರೂ ದಯವಿಟ್ಟು ತಿಳಿಸುತ್ತೀರೋ?

ಶ್ರೀ ಸಿ.ಎಂ.ಉದಾಸಿ:- ಇದೊಂದೇ ಆಧಾರವಿರಲಿಕ್ಕಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಎರಡು ರಾಜ್ಯಗಳಿಗೂ ಸಂಪರ್ಕ ಕಲ್ಪಿಸುವ ರಸ್ತೆಗಳಿಗೆ ಸಂಬಂಧಿಸಿದ್ದಾಗಿರಬಹುದು. ವಾಹನಗಳ ಸಂಚಾರದ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಘೋಷಿಸಲಾಗುತ್ತದಾದ್ದರಿಂದ ಆ ಕುರಿತ ಮಾಹಿತಿ ತರಿಸಿ ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ಹೆಚ್.ಶಿವಪ್ಪ:- ಅದರ ಬಗ್ಗೆ ತಮಗೆ ಗೊತ್ತಿರಲೇಬೇಕಲ್ಲ! ಇದಕ್ಕೆ ನೋಟೀಸ್ ಏನೂ ಬೇಕಾಗುವುದಿಲ್ಲ. ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಬೇಕಾದರೆ ಇಂತಿಂಥ ಅರ್ಹತೆಗಳಿರಬೇಕು? ಮಾನದಂಡಗಳಿರಬೇಕೆಂದು ತಮಗೆ ಗೊತ್ತಿರಲೇಬೇಕಲ್ಲವೇ?

ಅದನ್ನು ತಿಳಿಸಿ ಅಷ್ಟೆ.

ಅಧ್ಯಕ್ಷರು:- ನೀವು ಸಚಿವರಿಂದ ಮಾಹಿತಿಯನ್ನು ನಿರೀಕ್ಷಿಸುವುದು ಸರಿಯಾಗಿಯೇ ಇದೆ. ಆದರೆ, ತಾವು ಹೇಳಿರುವ ಮಾಹಿತಿ ಸಧ್ಯಕ್ಕೆ ಇಲ್ಲವಾದ್ದರಿಂದ ತರಿಸಿಕೊಡುವುದಾಗಿ ಹೇಳುತ್ತಿದ್ದಾರೆ. ಮಂತ್ರಿಗಳೆಂದರೆ ಪ್ರಪಂಚದ ಎಲ್ಲಾ ವಿಚಾರಗಳು ಕೂಡ ಗೊತ್ತಿರಬೇಕೆಂದೇನೂ ಅಲ್ಲ. The minister need not reply.

SRI H.SHIVAPPA:- We expect our ministers to be like that.

MR.SPEAKER:- What to do, you are not the Minister and he is the Minister. ಬೆಳಿಗ್ಗೆ ರಸ್ತೆಗಳ ಕುರಿತು ಚರ್ಚಿಸುವಾಗ ಹುಣಸೂರು - ವಿರಾಜಪೇಟೆ ಮಾರ್ಗದ ರಸ್ತೆ ಕುರಿತು ಹಿರಿಯ ಸದಸ್ಯರಾದ ನಂಜೇಗೌಡರು ಹೇಳಿದರು. ನಮ್ಮ ರಾಜ್ಯ ಹೆದ್ದಾರಿಗಳೇನಿವೆ, ಅನೇಕ ಕಡೆಗಳಲ್ಲಿ ಬಹಳ ಚಿಕ್ಕದಾಗಿವೆ, ಅಂದರೆ ರಸ್ತೆಯ ಅಗಲ ಕಡಿಮೆಯಿರುತ್ತದೆ. ಇದರಿಂದ ಏನಾಗುತ್ತದೆಂದರೆ, ರಸ್ತೆಯ ಎರಡೂ ಬದಿಗಳಲ್ಲಿ ಒಂದು ಅಡಿಯಷ್ಟು ಹಳ್ಳ ಇರುವುದರಿಂದ ಎದುರುಗಡೆಯಿಂದ ಯಾವುದಾಧಯೊಂದು ದೊಡ್ಡ ವಾಹನ ಬಂದಾಗ ಇತ್ತ ಕಡೆಯಿಂದ ಹೋಗುತ್ತಿರುವ ಕಾರು ರಸ್ತೆಯ ಕೆಳಬದಿಗಿಳಿಯಬೇಕು, ದ್ವಿಚಕ್ರ ವಾಹನಕ್ಕೆದುರಾಗಿ ಕಾರು ಬಂದರೆ ದ್ವಿಚಕ್ರ ರಸ್ತೆ ಬದಿಗಿಳಿಯಬೇಕು, ಎದುರುಬದುರಾಗಿ ಎರಡೂ ವಾಹನಗಳು ಕ್ರಮಿಸುವುದಕ್ಕಾಗುವುದಿಲ್ಲ. ಇದರಿಂದ ರಸ್ತೆ ಬದಿಗೆ ಇಳಿದರೆ ಹಳ್ಳಕ್ಕೆ ಇಳಿದಂತಾಗುತ್ತದೆ. ಇದರ ಬಗ್ಗೆ ನಿಮ್ಮ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು. ರಸ್ತೆಯ ಪಕ್ಕದಲ್ಲಿ ಹಳ್ಳವಿದ್ದರೆ ಮಣ್ಣು ಹಾಕುತ್ತಾರೆ, ಆದರೆ, ಮಣ್ಣು ಉಳಿಯುವುದಿಲ್ಲ, ಇದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು. ಆದುದರಿಂದ, ಎದುರುಗಡೆಯಿಂದ ವಾಹನಗಳು ಬಂದಾಗ ಪಕ್ಕಕ್ಕೆ ಇಳಿಯಲು ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡಬೇಕು.

ಶ್ರೀಮತಿ ಬಿ.ಟಿ.ಲಲಿತಾನಾಯಕ್:- ರಸ್ತೆಗಳ ಇಕ್ಕೆಲಗಳಲ್ಲಿ ಸರಿಯಾದ ರೀತಿಯಲ್ಲಿ ಫಿನಿಷಿಂಗ್ ಇಲ್ಲದಿರುವುದರಿಂದಲೇ ಅಪಘಾತಗಳಾಗುವುದು. ರಸ್ತೆಗಳ ಎರಡೂ ಬದಿಗಳಲ್ಲಿ ಫಿನಿಷಿಂಗ್ ಸರಿಯಾಗಿ ಇಲ್ಲದಿರುವ ಕಾರಣಕ್ಕಾಗಿ ಇಕ್ಕೆಲಗಳಲ್ಲಿ ಇಳಿಯುವುದಕ್ಕಾಗುವುದಿಲ್ಲ.

ಅಧ್ಯಕ್ಷರು:- ಪ್ರಶ್ನೋತ್ತರ ಇಲ್ಲಿಗೆ ಮುಗಿಯಿತು.

2. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ 22.7.1996ರಂದು 12ನೇ ಪಟ್ಟಿಯಲ್ಲಿರುವ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ 48 ಪ್ರಶ್ನೆಗಳ ಪೈಕಿ 43 ಪ್ರಶ್ನೆಗಳಿಗೆ